# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.695/2017/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 17.8.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ ಸತ್ಯಸಾಯಿ ಇಂಟರ್ ನ್ಯಾಷನಲ್ ಶಾಲೆ, ಬನಶಂಕರಿ, ತುಮಕೂರು, ಇಲ್ಲಿಯ ಮಕ್ಕಳ ಹಾಜರಾತಿ ಹಾಗೂ ಶಾಲೆಯ ಮೂಲಭೂತ ಸೌಕರ್ಯಗಳು ಕನಿಷ್ಠ ಮಟ್ಟದಲ್ಲಿ ಸಹ ಕಂಡುಬರದಿದ್ದರೆ, ಇದನ್ನು ನಿಯಮಾನುಸಾರ ಮುಚ್ಚಲು ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿ.

*******

ಶ್ರೀ. ಟಿ.ಪಿ.ರಾಜಣ್ಣ, ಕಾರ್ಯದರ್ಶಿ, ಪದ್ಮಪ್ರಿಯ ವಿದ್ಯಾ ಸಂಸ್ಥೆ, ಆಲಶೆಟ್ಟಿ ಕೆರೆಪಾಳ್ಯ, ಶಾಂತಿನಗರ, ತುಮಕೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಬಿ.ಬಸವರಾಜು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು, (ಇನ್ನು ಮುಂದೆ "ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಪಟ್ಟಣದಲ್ಲಿ ದೂರುದಾರರು 1991–92ರಿಂದ ಶ್ರೀ ಪದ್ಮಪ್ರಿಯ ವಿದ್ಯಾಸಂಸ್ಥೆ(ರಿ) ಶಾಂತಿನಗರ, ತುಮಕೂರು, ಎಂಬ ಸಂಸ್ಥೆ ನಡೆಸುತ್ತಿದ್ದು, ಈ ಸಂಸ್ಥೆಯ ಪಕ್ಕದಲ್ಲಿಯೇ 2014–15ನೇ ಸಾಲಿಗೆ ಹೊಸದಾಗಿ ಹಾಗೂ ಕಾನೂನುಬಾಹಿರವಾಗಿ ಸತ್ಯಸಾಯಿ ಇಂಟರ್ ನ್ಯಾಷನಲ್ ಶಾಲೆ ತೆರೆಯಲು ಎದುರುದಾರರು ಅನುಮತಿ ನೀಡಿರುತ್ತಾರೆ. ಈಗಾಗಲೇ ದೂರುದಾರರ ಸಂಸ್ಥೆ ಶಾಲೆ ತೆರೆದಿದ್ದು, ಪುನ: ಅದೇ ಸ್ಥಳದಲ್ಲಿ ಇನ್ನೊಂದು ಶಾಲೆ ತೆರೆಯಲು ಅವಕಾಶ ನೀಡಬಾರದೆಂದು ದೂರುದಾರರು ಅರ್ಜಿ ಸಲ್ಲಿಸಿದರೂ ಸಹ ಅದನ್ನು

ಲೆಕ್ಕಿಸದೆ ಹೊಸದಾಗಿ ಶಾಲೆ ತೆರೆಯಲು ಅನುಮತಿ ನೀಡಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಮ್ಮ ಸಂಸ್ಥೆಯ ಪಕ್ಕದಲ್ಲಿ ಹೊಸದಾಗಿ ಶಾಲೆ ತೆರೆಯಲು ಅನುಮತಿ ನೀಡಬಾರದೆಂದು ಯಾವತ್ತು ಅರ್ಜಿ ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ. ಮಾನ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು, ಇವರು ಶಾಲೆ ತೆರೆಯಲು ಅನುಮತಿ ನೀಡುವ ಪ್ರಾಧಿಕಾರಿಯಾಗಿದ್ದು, ದಿ.28.7.2014ರಂದು ಶ್ರೀ ಸತ್ಯಸಾಯಿ ಕಿರಿಯ ಪ್ರಾಥಮಿಕ ಶಾಲೆ, ಬನಶಂಕರಿ,ತುಮಕೂರು, ಇವರಿಗೆ 2014–15ನೇ ಸಾಲಿನಿಂದ ಶಾಲೆ ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆ. ಎದುರುದಾರರು ದೂರುದಾರರ ವಿದ್ಯಾ ಸಂಸ್ಥೆಗೆ ದಿ.30.8.2016ರಂದು ಭೇಟಿ ನೀಡಿ ಪರಿಶೀಲಿಸಿದಾಗ ಅವರು ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿಫಲರಾಗಿದ್ದಾರೆಂದು ಕಂಡುಬಂದಿರುತ್ತದೆ. ಈ ಬಗ್ಗೆ ನೋಟೀಸು ಜಾರಿ ಮಾಡಿ 7 ದಿನದಲ್ಲಿ ಲಿಖಿತ ಹೇಳಿಕೆ ಸಲ್ಲಿಸಲು ತಿಳಿಸಿದರೂ ಸಹ ಯಾವುದೇ ಪ್ರಗತಿ ಕಂಡುಬಂದಿರುವುದಿಲ್ಲ. ಆದ್ದರಿಂದ ದೂರುದಾರರ ಸಂಸ್ಥೆ ಮುಚ್ಚಬಹುದೆಂಬ ಕಾರಣ ಈ ರೀತಿ ಸುಳ್ಳು ದೂರನ್ನು ಸಲ್ಲಿಸಿದ್ದು, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರು 1991–92ರಲ್ಲಿಯೇ ಪದ್ಮಪ್ರಿಯ ಪ್ರಾಥಮಿಕ ಶಾಲೆಯನ್ನು ಅನುಮತಿಯೊಂದಿಗೆ ಪ್ರಾರಂಭಿಸಿದ್ದು ಕಂಡುಬರುತ್ತದೆ. ಅದೇ ರೀತಿ ಈ ಸಂಸ್ಥೆ ಅಂದಿನಿಂದ ನಿರಂತರವಾಗಿ ನಡೆಯುತ್ತಿದ್ದು, ಶಾಲೆ ದಾಖಲಾತಿ ಮಟ್ಟ 2000–01ರಿಂದ ಕಡಿಮೆಯಾಗುತ್ತಾ ಬಂದಿರುವುದು ದೂರುದಾರರೇ ಒದಗಿಸಿರುವ ಅಂಕಿಅಂಶಗಳಿಂದ ತಿಳಿದುಬರುತ್ತದೆ. ಇಂತಹ ಸ್ಥಿತಿಯಲ್ಲಿ ಇದೇ ಸಂಸ್ಥೆಯ ಪಕ್ಕದಲ್ಲಿ 2014–15ರ ಸಾಲಿನಿಂದ ಪ್ರಾರಂಭಿಸುವಂತೆ ಸತ್ಯಸಾಯಿ

ಇಂಟರ್ ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆಗೆ ಅನುಮತಿ ನೀಡಿರುವುದನ್ನು ಎದುರುದಾರರು ಒಪ್ಪಿಕೊಂಡಿರುತ್ತಾರೆ.

6. ಎದುರುದಾರರ ಆಕ್ಷೇಪಣೆಯನ್ನು ಗಮನಿಸಿದಾಗ ಶಾಲೆ ಅನುಮತಿ ನೀಡುವ ಪ್ರಾಧಿಕಾರ ಉಪನಿರ್ದೇಶಕರಾಗಿದ್ದು, ಅವರೇ ಶ್ರೀ ಸತ್ಯಸಾಯಿ ಶಾಲೆ ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಈ ಶಾಲೆ ಪ್ರಾರಂಭಿಸಲು ಅನುಮತಿ ನೀಡುವ ಪೂರ್ವದಲ್ಲಿ 3 ಜನರ ಸಮಿತಿ ರಚಿಸಿ, ಆ ಸಮಿತಿಯ ವರದಿಯ ಅನುಸಾರ ಮಂಜೂರಾತಿ ನೀಡಿರುತ್ತಾರೆಂದು ತಿಳಿಸಿದ್ದು, ಎದುರುದಾರರು ಆ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿರಬಹುದೆಂದು ಕಂಡುಬರುತ್ತದೆ. ಏಕೆಂದರೆ ತಾಲ್ಲೂಕಿನ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ಇಂತಹ ಸಮಿತಿಯ ಸದಸ್ಯರಾಗಿದ್ದು, ಇವರ ಅಭಿಪ್ರಾಯವೂ ಸಹಾ ಮಂಜೂರಾತಿ ನೀಡುವ ಸಮಯದಲ್ಲಿ ಗಣನೆಗೆ ಬರುತ್ತದೆ.

7. ಎದುರುದಾರರು ಆಕ್ಷೇಪಣೆಯಲ್ಲಿ ಮುಂದುವರೆದು ಹೇಳುವುದೇನೆಂದರೆ ದಿ.30.8.2016ರಂದು ದೂರುದಾರರ ಶಾಲೆಗೆ ಶಿಕ್ಷಣ ಸಂಯೋಜಕರೊಂದಿಗೆ ಸ್ಥಳ ಪರಿಶೀಲನೆ ಮಾಡಿದಾಗ ಅಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳನ್ನು ನೀಡಲು ಆಡಳಿತ ಮಂಡಳಿ ವಿಫಲವಾಗಿದ್ದು, ಆ ಬಗ್ಗೆ ನೋಟೀಸು ಜಾರಿಮಾಡಿ 7 ದಿನಗಳೊಳಗೆ ಉತ್ತರಿಸುವಂತೆ ಸೂಚಿಸಿದ್ದರೂ ಸಹಾ ಉತ್ತರ ನೀಡಲಿಲ್ಲವೆಂದು ತಿಳಿಸಿರುತ್ತಾರೆ. ಎದುರುದಾರರು ದೂರಿನಲ್ಲಿಯ ಅಂಶಗಳ ಬಗ್ಗೆ ಮೊದಲು ಕ್ರಮ ಜರುಗಿಸದೆ ಹಾಗೂ ಅದಕ್ಕೆ ಪೂರಕವಾಗುವಂತೆ ಉತ್ತರಿಸದೆ ದೂರು ನೀಡಿದ ವ್ಯಕ್ತಿಯ ಸಂಸ್ಥೆಗೆ ಭೇಟಿ ನೀಡಿ ಅವರ ನ್ಯೂನ್ಯತೆ ಕಂಡುಹಿಡಿದು ನೋಟೀಸು ನೀಡಿದ್ದು ಕಂಡುಬರುತ್ತದೆ.

8. ದೂರುದಾರರು 1991–92ರಿಂದ ಶಾಲೆ ನಡೆಸುತ್ತಿದ್ದರೂ ಸಹ ಇದುವರೆಗೆ ಆ ಶಾಲೆಯಲ್ಲಿರುವ ಮೂಲಭೂತ ಸೌಕರ್ಯಗಳನ್ನು ಎದುರುದಾರರು ಪರಿಶೀಲಿಸದೆ ಈ ದೂರುದಾರರು ಮನವಿ ಸಲ್ಲಿಸಿದ ನಂತರ ಯಾವುದೇ ಕಾರಣವಿಲ್ಲದೆ ಹಾಗೂ ಮೇಲಾಧಿಕಾರಿಗಳ ಆದೇಶವಿಲ್ಲದೆ 30.8.2016ರಂದು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದು ದೂರುದಾರರ ಮಾನಸಿಕ

ಸ್ಥೈರ್ಯವನ್ನು ಕುಗ್ಗಿಸುವ ಪ್ರಯತ್ನವೆಂದು ಕಂಡುಬರುತ್ತದೆ. ಎದುರುದಾರರೇ ತಿಳಿಸಿರುವಂತೆ ದೂರುದಾರರ ಶಾಲೆಯಲ್ಲಿಯೇ ದಾಖಲಾತಿ ಕಡಿಮೆ ಇದ್ದು, ಇಂತಹ ಸ್ಥಳದಲ್ಲಿ ಇನ್ನೊಂದು ಶಾಲೆ ತೆರೆಯಲು ಅನುಮತಿ ನೀಡಿರುವುದು ಹಾಗೂ ಅಲ್ಲಿ ಹೊಸ ಸಂಸ್ಥೆ ಅಗತ್ಯವಿಲ್ಲವೆಂದು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲು ಎದುರುದಾರರು ವಿಫಲರಾಗಿರುತ್ತಾರೆಂದು ಕಂಡುಬರುತ್ತದೆ.

9. ದೂರುದಾರರು ತಮಗೆ ಅನ್ಯಾಯವಾಗುತ್ತಿದೆಯೆಂದು ಎದುರುದಾರರಿಗೆ ಮನವಿ ಸಲ್ಲಿಸಿದರೆ ಅದರ ಮೇಲೆ ಸೂಕ್ತ ಕ್ರಮಕೈಗೊಂಡು ದೂರುದಾರರಿಗೆ ಪರಿಹಾರ ಒದಗಿಸುವುದನ್ನು ಬಿಟ್ಟು, ಪುನ: ಅವರ ಸಂಸ್ಥೆಯಲ್ಲಿಯೇ ನ್ಯೂನ್ಯತೆಗಳನ್ನು ಕಂಡುಹಿಡಿದು ನೋಟೀಸು ನೀಡಿದ್ದು ಎದುರುದಾರರ ಅಧಿಕಾರ ದುರುಪಯೋಗವೆಂದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ. ಈ ರೀತಿ ವಿವೇಚನೆಯಿಲ್ಲದೆ ಪದೇಪದೇ ಹೊಸಹೊಸ ವಿದ್ಯಾಸಂಸ್ಥೆಗಳನ್ನು ತೆರೆಯಲು ಅನುಮತಿ ನೀಡುವುದರಿಂದ ಇವುಗಳು ಮುಂದೊಂದು ದಿನ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗುವುದಲ್ಲದೆ ಇಂತಹ ಸಂಸ್ಥೆಗಳ ಪ್ರಾರಂಭಕ್ಕೆ ಅನುಮತಿ ನೀಡುವುದರ ಹಿಂದೆ ಎದುರುದಾರರು ಅಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ್ದಾರೆಂದು ಸಂಶಯವುಂಟಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿರುವುದರಿಂದ ಉಪನಿರ್ದೇಶಕರು ಶಾಲೆ ತೆರೆಯಲು ಅನುಮತಿ ನೀಡುವ ಅಧಿಕಾರಿಯಾದರೂ ಸಹ ಅಂತಹವುಗಳನ್ನು ತಡೆಗಟ್ಟಲು ಎದುರುದಾರರು ಸಹ ಅಧಿಕಾರ ಹೊಂದಿರುತ್ತಾರೆನ್ನುವುದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಎದುರುದಾರರು ಪರಿಣಾಮಕಾರಿ ಕ್ರಮಕೈಗೊಂಡು ದೂರುದಾರರ ಸಮಸ್ಯೆಯನ್ನು ಪರಿಹರಿಸಲು ಹಾಗೂ ಅವರಿಗೆ ನ್ಯಾಯದೊರಕಿಸಿಕೊಡಲು ವಿಫಲರಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೆ, 2014–15ನೇ ಸಾಲಿನಿಂದ ಪದ್ಮಪ್ರಿಯ ಶಿಕ್ಷಣ ಸಂಸ್ಥೆಯ ಪ್ರದೇಶದಲ್ಲಿ ಹೊಸದಾಗಿ ಸತ್ಯಸಾಯಿ ಇಂಟರ್ ನ್ಯಾಷನಲ್ ಶಾಲೆ ತೆರೆಯಲು ಶಿಕ್ಷಣ ಇಲಾಖೆ ಅನುಮತಿ ನೀಡಿದ್ದು, ಈಗಾಗಲೇ

ಇರುವ ಶಾಲೆಯಲ್ಲಿಯೇ ಹಾಜರಾತಿ ಕಡಿಮೆ ಇರುವುದರಿಂದ ಪುನ: ಇನ್ನೊಂದು ಹೊಸ ಶಾಲೆ ಅಗತ್ಯವಿಲ್ಲವೆಂದು ದಾಖಲೆಗಳಿಂದ ಕಂಡುಬರುತ್ತದೆ.

10. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ.12(1)ರಡಿಯಲ್ಲಿ, ಶ್ರೀ ಸತ್ಯಸಾಯಿ ಇಂಟರ್ ನ್ಯಾಷನಲ್ ಶಾಲೆ, ಬನಶಂಕರಿ, ತುಮಕೂರು ಇಲ್ಲಿಯ ಮಕ್ಕಳ ಹಾಜರಾತಿ ಹಾಗೂ ಶಾಲೆಯ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ, ಈ ಎರಡೂ ಅಂಶಗಳು ಕನಿಷ್ಟ ಮಟ್ಟದಲ್ಲಿ ಸಹ ಕಂಡುಬರದಿದ್ದರೆ, (If not even minimum strength and basic amenities) ಶ್ರೀ ಸತ್ಯಸಾಯಿ ಇಂಟರ್ ನ್ಯಾಷನಲ್ ಶಾಲೆ, ಬನಶಂಕರಿ, ತುಮಕೂರು, ಇದನ್ನು ನಿಯಮಾನುಸಾರ ಮುಚ್ಚಲು ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ವರದಿ ಸಲ್ಲಿಸಲು ಕೋರಲಾಗಿದೆ.

Sd/- 17/8/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

17/8